5.5 ದಶಲಕ್ಷ ಯೂನಿಟ್ಸುಗಳನ್ನು ಪ್ರತಿ ಯೂನಿಟ್‌ಗೆ 180 ರಿಂದ 185 ಪೈಸೆಗಳ ದರದಲ್ಲಿ ಖರೀದಿಸಲಾಗಿದೆ.

ಎ.ಬಿ.ಟಿಯ ಅಳವಡಿಕೆಯ ನಂತರ, ರಾಜ್ಯವು ಕೇಂದ್ರ ವಿದ್ಯುತ್ ಜಾಲದಿಂದ ನಿಗದಿತ ಪ್ರಮಾಣಕ್ಕಿಂತ, ಹೆಚ್ಚು ವಿದ್ಯುತ್‌ನ್ನು ಪಡೆಯುತ್ತಿದೆ. ಈ ರೀತಿ ಹೆಚ್ಚಿಗೆ ಪಡೆದ ವಿದ್ಯುತ್‌ನ ದರವು ವಿದ್ಯುತ್ ಸರಬರಾಜಿನ ತರಂಗವನ್ನು ಅವಲಂಬಿಸಿದ್ದು, (49.02 ರಿಂದ 50.50 ರವರೆಗೆ) ಗರಿಷ್ಠ ದರವು 4.20 ರವರೆಗಿರುತ್ತದೆ.

ಅ) ರಾಜ್ಯದ ದೈನಂದಿನ ಅನಿರ್ಬಂಧಿತ ವಿದ್ಯುತ್ ಬೇಡಿಕೆಯು 109 ದಶಲಕ್ಷ ಯೂನಿಟ್ಸುಗಳು ಮತ್ತು ಈಗಿನ ದೈನಂದಿನ ಪೂರೈಕೆಯ ಪ್ರಮಾಣ 87.765 ದಶಲಕ್ಷ ಯೂನಿಟ್ಸುಗಳು. ಹೀಗಾಗಿ, ದಿನವಹಿ ಸುಮಾರು 21 ದಶಲಕ್ಷ ಯೂನಿಟ್ಸುಗಳ ವಿದ್ಯುತ್ ಕೊರತೆಯನ್ನು ಪ್ರಸ್ತುತ ರಾಜ್ಯವು ಎದುರಿಸುತ್ತಿದೆ.

ಇ) ವಿವಿಧ ವಿದ್ಯುತ್ ಸರಬರಾಜು ಕಂಪೆನಿಗಳು ಕರ್ನಾಟಕ ವಿದ್ಯುತ್ ನಿಯಂತ್ರಣ ಕಾಯಿದೆ ಪ್ರಕಾರ, ಪ್ರತಿ ವರ್ಷ ನವೆಂಬರ್ 30 ರೊಳಗೆ ಮುಂದಿನ ವರ್ಷದ ಆದಾಯ ವೆಚ್ಚ ಪಟ್ಟಿ ಮತ್ತು ದರ ಏರಿಕೆ ಪ್ರಸ್ತಾವವನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗಕ್ಕೆ ಸಲ್ಲಿಸಬೇಕು. ಅದರಂತೆ ಆಯೋಗಕ್ಕೆ ವಿದ್ಯುತ್ ಸರಬರಾಜು ಕಂಪನಿಗಳು ಸಲ್ಲಿಸಿವೆ. ವಿದ್ಯುತ್ ದರವನ್ನು ಪರಿಷ್ಕರಿಸುವ ಬಗ್ಗೆ ಅಂತಿಮ ತೀರ್ಮಾನವನ್ನು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಕೈಗೊಳ್ಳಬೇಕಾಗಿರುತ್ತದೆ.

ಈ) ಸಂಜ್ಞೇಯ (ಕಾಗ್ನಿಸಿಬಲ್) ವಿದ್ಯುತ್ ಕಳವು ಪ್ರಕರಣಗಳಲ್ಲಿ ಭಾಗಿಗಳಾಗಿರುವ ಆರೋಪಿಗಳ ವಿರುದ್ಧ, ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಿಕೊಳ್ಳುವ ಜೊತೆಗೆ ಹಿಂಬಾಕಿ ದಂದ ವಸೂಲಾತಿ ಕ್ರಮವನ್ನೂ ಕೈಗೊಳ್ಳಲಾಗುತ್ತದೆ. ಅಸಂಜ್ಞೇಯ (ನಾನ್‌ಕಾಗ್ನಿಸಿಬಲ್) ವಿದ್ಯುತ್ ಕಳವು ಪ್ರಕರಣಗಳಲ್ಲಿ ಭಾಗಿಗಳಾದವರಿಗೆ ಹಿಂಬಾಕಿ ದಂಡವನ್ನು ವಿಧಿಸಲಾಗುತ್ತದೆ.

ಕೊರಟಗೆರೆ ತಾಲ್ಲೂಕಿನಲ್ಲಿ ಸಿಎಲ್ -2. ಸಿವಿಲ್ 9ರ ಪರವಾನಿಗೆ

782(817) ಶ್ರೀ ಚನ್ನಿಗಪ್ಪ ಸಿ. (ಕೊರಟಗೆರೆ) ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೊರಟಗೆರೆ ತಾಲ್ಲೂಕಿನಲ್ಲಿ ಸಿಎಲ್-2 ಸಿಎಲ್-9 ಪರವಾನಗಿ ಹೊಂದಿರುವ ಪರವಾನಗಿದಾರರ ಸಂಖ್ಯೆ ಎಷ್ಟು; ವಿವರವಾರು ಒದಗಿಸುವುದು.

ಆ) ಕಳೆದ ಮೂರು ವರ್ಷಗಳಿಂದ ಈ ತಾಲ್ಲೂಕಿನ ಅಬಕಾರಿ ಪರವಾನಗಿದಾರರಿಂದ ಬಂದಿರುವ ಆದಾಯವೆಷ್ಟು;

ಇ) ಈ ತಾಲ್ಲೂಕಿನಲ್ಲಿ ತೀವ್ರ ಗತಿಯಲ್ಲಿ ಸೆಕೆಂಡ್ಸ್‌ಗಳ ಹಾವಳಿಯು ಹೆಚ್ಚಾಗಿದ್ದು. ಅದನ್ನು ಮಾಡುತ್ತಿರುವ ಪರವಾನಗಿದಾರರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದರೆ ಅಬಕಾರಿ ಅಧಿಕಾರಿಗಳ ವಿರುದ್ಧ ಕೈಗೊಳ್ಳುವ ಕ್ರಮವೇನು?

ಶ್ರೀ ಎಂ.ಎಂ.ನಾಣಯ್ಯ (ಅಬಕಾರಿ ರಾಜ್ಯ ಸಚಿವರು)

ಅ) ಸಿಎಲ್-2 - 9

	ಸಿಎಲ್ - 9	3	
	ಒಟ್ಟು -	12	
ಆ)	1999-2000	-	ರೂ. 2,58,10,500
	2000-2001	-	ರೂ. 3,16,82,300
	2001-2002	-	ರೂ. 3,59,38,300

ಇ) ಕೊರಟಗೆರೆ ತಾಲ್ಲೂಕಿನಲ್ಲಿ ಕರಕೊಡದ ಮದ್ಯ ಮಾರಾಟದ ಬಗ್ಗೆ ಮಾಹಿತಿ ಬಂದಿದ್ದು, ಇದನ್ನು ತಡೆಗಟ್ಟಲು ಅವ್ಯಾಹತ ಅಬಕಾರಿ ದಾಳಿ, ರಾತ್ರಿಗಸ್ತು, ರಸ್ತೆ ಕಾವಲುಗಳನ್ನು ಹಮ್ಮಿಕೊಂಡು ಕಾರ್ಯನಿರ್ವಹಿಸಲಾಗುತ್ತಿದೆ. 2002-03ನೇ ಸಾಲಿಗೆ 18 ಬಿ.ಎಲ್.ಸಿ. ಮತ್ತು 1 ಘೋರ ಮೊಕದ್ದಮೆ (ಒಟ್ಟು 19 ಪ್ರಕರಣಗಳು) ದಾಖಲಿಸಿ, 155 ಲೀ. ಸೇಂದಿ, 657.720 ಲೀ ತೆರಿಗೆ ರಹಿತ ಭಾರತೀಯ ಮದ್ಯ ಮತ್ತು 663 ಲೀ. ಬಿಯರ್ ಅನ್ನು ವಶಪಡಿಸಿಕೊಳ್ಳಲಾಗಿದೆ.

ಈ) ಮೇಲಿನ ಪ್ರಶ್ನೆ (ಇ) ಗೆ ನೀಡಿರುವ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಅನುಬಂಧ

ಕೊರಟಗೆರೆ ತಾಲ್ಲೂಕಿನಲ್ಲಿರುವ ಸಿ.ಎಲ್-2 ಹಾಗೂ ಸಿ.ಎಲ್-9 ಸನ್ನದುಗಳ ವಿವರ:-

ಕ್ರ. ಸಂ.	ಸನ್ನದುದಾರರ ಹೆಸರು ಮತ್ತು ವಿಳಾಸ	
	ಸಿ.ಎಲ್-2	ಸಿಎಲ್-9
1.	ಶ್ರೀ ಎಸ್.ನಟರಾಜ್, ಸಂ. 63/66, ಇರಕಸಂದ್ರ ಕಾಲೋನಿ, ಕೊರಟಗೆರೆ ತಾ:	1. ಹೆಚ್. ಮಹದೇವ್ ಸರ್ವೆ ನಂ. 118, ಜಂಪೇನಹಳ್ಳಿ ಕ್ರಾಸ್, ಕೊರಟಗೆರೆ ತಾ:
2.	ಸೀನಪ್ಪ ಖಾತಾ ಸಂ ಸಂ: 205/1-ಸಿ, ಬೈರೇನಹಳ್ಳಿ, ಕೊರಟಗೆರೆ ತಾ:	2. ಎಂ. ನವೀನ್ ಕುಮಾರ್, ಖಾತಾ ನಂ. 13/1, 13/2, ಕೊರಟಗೆರೆ ಟೌನ್
3.	ಜಿ. ಜಯರಾಂ, ನಂ. 930, ಸುಣ್ಣಕಲ್ಲರ ಬೀದಿ, ಕೊರಟಗೆರೆ ಟೌನ್.	3. ಹೆಚ್. ಮಹದೇವ ಸಂ: 2340, ಮುಖ್ಯ ರಸ್ತೆ ಕೊರಟಗೆರೆ.
4.	ಟಿ.ಡಿ. ಪ್ರಸನ್ನಕುಮಾರ್, ನಂ.3, ಅಂಗಡಿ ನಂ.1 ತೋವಿನಕೆರೆ, ಕೊರಟಗೆರೆ ತಾಲ್ಲೂಕು,	
5.	ಶ್ರೀ ಬಿ.ಎಸ್. ರಂಗರಾವ್, ಖಾತೆ ಸಂ:197, ತುಂಬಾಡಿ, ಕೊರಟಗೆರೆ ತಾ:	
6.	ಹೆಚ್. ಮಹದೇವ ಸಂ.537/691 ಹೊಳವನಹಳ್ಳಿ, ಕೊರಟಗೆರೆ ತಾ:	
7.	ಜಿ. ಜಯರಾಂ, ಖಾತಾ ಸಂ: 596/ 986/2 ಹೊಳವನಹಳ್ಳಿ, ಕೊರಟಗೆರೆ ತಾ:	

8. ಹೆಚ್.ಆರ್. ನಾಗರಾಜ್, ಸಂ. 485
   ಮುಖ್ಯ ರಸ್ತೆ, ಕೊರಟಗೆರೆ ಟೌನ್,
9. ಟಿ.ಎಂ. ಕಲಾವತಿ, ಖಾತಾ ನಂ. 381,
   ಕೋಳಾಲ ಕೊರಟಗೆರೆ ತಾ:

ರಾಜ್ಯದಲ್ಲಿ ಲಾಟರಿ ಟಿಕೇಟುಗಳಿಂದ ಆಗುತ್ತಿರುವ ದುಷ್ಪರಿಣಾಮಗಳು

783(823) ಶ್ರೀ ಚೌಡರೆಡ್ಡಿ (ಚಂತಾಮಣಿ) ಮಾನ್ಯ ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ರೀತಿಯ ಲಾಟರಿಗಳು ಮತ್ತು ಮಟ್ಕಾಗಳು ಚಾಲನೆಯಲ್ಲಿ ಇದೆ; ಮತ್ತು ಯಾವ ಯಾವ ರಾಜ್ಯಕ್ಕೆ ಸಂಬಂಧಪಟ್ಟಿರುತ್ತದೆ.

ಆ) ಈ ಲಾಟರಿಗಳಿಂದ ಎಷ್ಟು ಹಣ ಸರ್ಕಾರದ ಬೊಕ್ಕಸಕ್ಕೆ ಆದಾಯ ರೂಪದಲ್ಲಿ ಬರುತ್ತಿದೆ;

ಇ) ಲಾಟರಿ ವ್ಯವಹಾರಗಳಲ್ಲಿ ಬಡ ಕೂಲಿ ಕಾರ್ಮಿಕರು ಹಾಗೂ ಮಧ್ಯಮ ವರ್ಗದವರು ದುರಾಸೆ ಪಟ್ಟು ಹಣ ಕಳೆದುಕೊಂಡು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಪಕ್ಕದ ತಮಿಳು ನಾಡು ರಾಜ್ಯದಲ್ಲಿ ಲಾಟರಿ ಮತ್ತು ಮಟ್ಕಾಗಳನ್ನು ಈ ಸರ್ಕಾರವು ನಿಷೇಧಿಸಿರುವುದು ಈ ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಬಂದಿದ್ದರೆ, ಈ ರೀತಿ ಕ್ರಮ ಕೈಗೊಳ್ಳಲು ಸರ್ಕಾರದವರು ಪರಿಶೀಲಿಸುವರೆ?

ಶ್ರೀ ಬಾಬು ರಾವ್ ಚಿಂಚನಸೂರ್ (ಸಣ್ಣ ಉಳಿತಾಯ ಮತ್ತು ರಾಜ್ಯ ಲಾಟರಿ ಹಾಗೂ ವಿಮೆ ರಾಜ್ಯ ಸಚಿವರು)

ಅ) ಕರ್ನಾಟಕ ರಾಜ್ಯ ಸರ್ಕಾರದಿಂದ ಸಾಂಪ್ರದಾಯಿಕ ಹಾಗೂ ಗಣಕೀಕೃತ ನೆಟ್‌ವರ್ಕ್ ಲಾಟರಿಗಳನ್ನು ನಡೆಸಲಾಗುತ್ತಿದೆ. ಸಾಂಪ್ರದಾಯಿತ ಲಾಟರಿಗಳಡಿಯಲ್ಲಿ ಈ ಕೆಳಕಂಡ ಡ್ರಾಗಳನ್ನು ನಡೆಸಲಾಗುತ್ತಿದೆ:

1. ಕೃಷ್ಣ ಸಾಪ್ತಾಹಿಕ ಡ್ರಾ
2. ನಂದಿ ಸಾಪ್ತಾಹಿಕ ಡ್ರಾ
3. ಕಾವೇರಿ ಸಾಪ್ತಾಹಿಕ ಡ್ರಾ
4. ಕಬಿನಿ ಸಾಪ್ತಾಹಿಕ ಡ್ರಾ
5. ತುಂಗ ಸಾಪ್ತಾಯಿಕ ಡ್ರಾ
6. ನೇತ್ರಾವತಿ ಸಾಪ್ತಾಯಿಕ ಡ್ರಾ
7. ಅದೃಷ್ಟನಿಧಿ ಸಾಪ್ತಾಯಿಕ ಡ್ರಾ
8. ಭದ್ರ ಸಾಪ್ತಾಯಿಕ ಡ್ರಾ
9. ಕಪಿಲಾ ಸಾಪ್ತಾಯಿಕ ಡ್ರಾ
10. ಆಶಾನಿಧಿ ಸಾಪ್ತಾಯಿಕ ಡ್ರಾ
11. ಐಶ್ವರ್ಯನಿಧಿ ಮಾಸಿಕ ಡ್ರಾ